**ಸಿ.ಸಿ.ನಂಃ 736/2026**

**ಪಿ ಡಬ್ಲ್ಯೂಃ 01**

**(ಇಂದು ದಿನಾಂಕಃ 27.07.2026 ರಂದು ಪಿ ಡಬ್ಲ್ಯೂ 01 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)**

**<u>ಪಾಟೀ ಸವಾಲುಃ</u> ಆರೋಪಿ ಪರ ವಕೀಲರಾದ ಶ್ರೀ. ಪಿ.ಜಿ.ಪಿ. ರವರಿಂದ**

ಆರೋಪಿ ಈ ಹಿಂದೆ ನಿಮ್ಮ ಸಂಘದಿಂದ ಒಂದು ಸಾಲವನ್ನು ಪಡೆದುಕೊಂಡಿದ್ದರು ಎಂದರೆ ಸರಿ. ಆ ಸಾಲಕ್ಕೆ ಸಚಿನ ಕುತ್ತಳಕರ ಮತ್ತು ಮಂಜುನಾಥ ಶೇಟ್ ಎಂಬುವವರು ಜಾಮೀನುದಾರರಾಗಿದ್ದರು ಎಂದರೆ ನನಗೆ ನೆನಪಿಲ್ಲ. ಸದರಿ ಹಳೆಯ ಸಾಲ ಚುಕ್ತಾ ಆಗಿದೆ ಎಂದರೆ ಸರಿ.

2. ಈ ಪ್ರಕರಣದಲ್ಲಿ ಉಲ್ಲೇಖಿಸಿರುವ ಸಾಲಕ್ಕೆ ಆರೋಪಿ ಜಾಮೀನುದಾರರು ಎಂದರೆ ಸರಿ. ಈ ಸಾಲಕ್ಕೆ ಸಚಿನ ಕುತ್ತಳಕರ ರವರು ಮುಖ್ಯ ಸಾಲಗಾರರು ಎಂದರೆ ಸರಿ. ಸಚಿನ ಕುತ್ತಳಕರ ರವರು ಯಾವಾಗ ಸಾಲ ಪಡೆದುಕೊಂಡಿದ್ದರು ಎಂದರೆ ಸಾಕ್ಷಿ ದಿನಾಂಕ 25.08.2022 ರಂದು ಸಾಲ ಪಡೆದುಕೊಂಡಿದ್ದರು ಅಂತಾ ಉತ್ತರಿಸುತ್ತಾರೆ. ಸದರಿ ಸಾಲಕ್ಕೆ ಆರೋಪಿ ಮತ್ತು ವೆಂಕಟೇಶ ನಾರಾಯಣ ಸ್ವಾಮಿ ಜಾಮೀನುದಾರರು ಎಂದರೆ ಸರಿ. ಸಾಲದ ಭದ್ರತೆಯ ಸಲುವಾಗಿ ಸಚಿನ ಕುತ್ತಳಕರ ರವರಿಂದ ಎಫ್ ಡಿ ಹಣ, ಷೇರು ಹಣ ಹಾಗೂ ಜಾಮೀನುದಾರರನ್ನು ಪಡೆದುಕೊಂಡಿರುತ್ತೇವೆ. ಅವರಿಂದ ಎಫ್ ಡಿ ಹಣ ರೂ. 10,000/- ಮತ್ತು ಷೇರು ಹಣ ರೂ. 5,000/- ಪಡೆದುಕೊಂಡಿರುತ್ತೇವೆ. ಅವರು ಕಂತಿನ ಹಣ ಬಾಕಿ ಮಾಡಿಕೊಂಡ ಬಗ್ಗೆ ನೋಟೀಸು ಕೊಟ್ಟಿದ್ದೇವೆ. ಅವರಿಗೆ ಯಾವ ದಿನಾಂಕದಂದು ನೋಟೀಸು ಕೊಟ್ಟಿದ್ದೀರಿ ಎಂದರೆ ಸಾಕ್ಷಿ 3 ಬಾರಿ ನೋಟೀಸು ಕೊಟ್ಟಿದ್ದೇವೆ ಅಂತಾ ಉತ್ತರಿಸುತ್ತಾರೆ. ಆ ರೀತಿ ಕೊಟ್ಟ ನೋಟೀಸಿನ ಪ್ರತಿಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ. ಸಾಲದ ಜಾಮೀನುದಾರರಿಗೆ ನೋಟೀಸು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಹೌದು ಅಂತಾ ಉತ್ತರಿಸುತ್ತಾರೆ. ಸಾಲಗಾರರಿಗೆ ಹಾಗೂ ಜಾಮೀನುದಾರರಿಗೆ ಸೇರಿ ನೋಟೀಸು ಕೊಟ್ಟಿದ್ದೆವು ಅಂತಾ ಉತ್ತರಿಸುತ್ತಾರೆ.

3. ಸಾಲ ಪಡೆದುಕೊಂಡ ನಂತರ ಸಚಿನ ಕುತ್ತಳಕರ ರವರು ಎಷ್ಟು ಹಣ ತುಂಬಿರುತ್ತಾರೆ ಎಂದರೆ ಸಾಕ್ಷಿ ರೂ. 29,000/- ತುಂಬಿರುತ್ತಾರೆ ಅಂತಾ ಉತ್ತರಿಸುತ್ತಾರೆ. ಸಾಕ್ಷಿ ಮುಂದುವರಿದು ಅಂದಾಜು 4 ಕಂತುಗಳನ್ನು ತುಂಬಿರುತ್ತಾರೆ ಅಂತಾ ಉತ್ತರಿಸುತ್ತಾರೆ. ಆರೋಪಿ ತುಂಬಿರುವ ಕಂತಿನ ಹಣವನ್ನು ನಿಪಿ-12 ರಲ್ಲಿ ನಮೂದು ಮಾಡಲಾಗಿದೆ. ನೋಟೀಸು ಕೊಟ್ಟ ನಂತರ ಜಾಮೀನುದಾರರು ಯಾವುದೇ ಹಣ ತುಂಬಿಲ್ಲ.

4. ಈ ಪ್ರಕರಣದಲ್ಲಿ ಸಂಘವನ್ನು ಪ್ರತಿನಿಧಿಸಿ ಸಾಕ್ಷ್ಯ ನುಡಿಯಲು ಠರಾವು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ

**ಸಿ.ಸಿ.ನಂಃ 736/2026**

**ಪಿ ಡಬ್ಲ್ಯೂಃ 01**

ಹೌದು ಅಂತಾ ಉತ್ತರಿಸುತ್ತಾರೆ. ಸಂಘದ ಆಡಳಿತ ಮಂಡಳಿಯ ಎಲ್ಲಾ ಸದಸ್ಯರು ಸಹಿ ಮಾಡಿರುವ ಠರಾವನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಮ್ಯಾನೇಜಿಂಗ್ ಡೈರೆಕ್ಟರ್ ರವರು ಸಹಿ ಮಾಡಿರುವ ಠರಾವನ್ನು ಹಾಜರುಪಡಿಸಿದ್ದೇವೆ ಅಂತಾ ಉತ್ತರಿಸುತ್ತಾರೆ. ಈ ಪ್ರಕರಣವನ್ನು ಪ್ರತಿನಿಧಿಸಲು ನಿಮ್ಮ ಪರವಾಗಿ ಸಂಘದಲ್ಲಿ ಯಾವುದೇ ಠರಾವು ಆಗಿರುವುದಿಲ್ಲ ಎಂದರೆ ಸರಿಯಲ್ಲ.

5. ಆರೋಪಿಯು ನಿಮ್ಮ ಸಂಘದಿಂದ ಪಡೆದಿದ್ದ ಹಳೆಯ ಸಾಲಕ್ಕೆ ಭದ್ರತೆಗಾಗಿ ಕೊಟ್ಟ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಅವರ ವಿರುದ್ಧ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ. ನಿಪಿ-3 ರ ಚೆಕ್ಕನ್ನು ಆರೋಪಿ ಈ ಪ್ರಕರಣದಲ್ಲಿ ಉಲ್ಲೇಖಿಸಿರುವ ಸಾಲದ ಮರುಪಾವತಿಗಾಗಿ ಕೊಟ್ಟಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-3 ರ ಚೆಕ್ಕಿನಲ್ಲಿ ಕಾಣಿಸಿರುವ ಮೊಬಲಗಿನ ಹಣ ಆರೋಪಿಯಿಂದ ಕಾನೂನು ಸಮ್ಮತವಾಗಿ ವಸೂಲು ಮಾಡತಕ್ಕ ಹಣ ಆಗಿರುವುದಿಲ್ಲ ಎಂದರೆ ಸರಿಯಲ್ಲ.

6. ಸಚಿನ ಕುಡ್ತಳಕರ ರವರು ನಿಪಿ-7 ರಲ್ಲಿ ಕಾಣಿಸಿರುವ ವಿಳಾಸದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ**

**ಸಹಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ., ಕಾರವಾರ.**